**All India Radio: Bangalore**
**National Bulletin In Kannada**
**25.06.2025  19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**25.06.2025  19.35 p.m.**

**<><><><>**

ಮುಖ್ಯಾಂಶಗಳು

- **ಭಾರತೀಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಸೇರಿದಂತೆ ನಾಲ್ವರು ಗಗನಯಾತ್ರಿಗಳನ್ನು ಹೊತ್ತ ಅಕ್ಸಿಯಂ-೪ ಮಿಷನ್ ; ಯಶಸ್ವಿ ಉಡಾವಣೆ**
- **ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ - ಐಎಇಎ ಜೊತೆಗಿನ ಸಹಕಾರವನ್ನು ಸ್ಥಗಿತಗೊಳಿಸುವ ಮಸೂದೆ ಅಂಗೀಕರಿಸಿದ ಇರಾನ್ ಸಂಸತ್**
- **ದೇಶಾದ್ಯಂತ ಇಂದು ಸಂವಿಧಾನ ಹತ್ಯಾ ದಿವಸ್ ಆಚರಣೆ ; ಸಂಪುಟ ಸಭೆಯಲ್ಲಿ ನಿರ್ಣಯ ಅಂಗೀಕಾರ**
- **ವಿಶ್ವಪ್ರಸಿದ್ಧ ಪುರಿ ಜಗನ್ನಾಥ ರಥಯಾತ್ರೆ ಇದೇ ೨೭ರಿಂದ ಆರಂಭ ; ಬಿಗಿ ಭದ್ರತೆಗೆ ಸರ್ವ ಸಿದ್ಧತೆ**

<><><><>

ಭಾರತೀಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಸೇರಿದಂತೆ ನಾಲ್ವರು ಗಗನಯಾತ್ರಿಗಳನ್ನು ಹೊತ್ತ ಅಕ್ಸಿಯಂ-೪ ಮಿಷನ್ ಇಂದು ಅಮೆರಿಕದ ಫ್ಲೋರಿಡಾದ ಕೆನೆಡಿ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆಯಾಯಿತು. ಸ್ಪೇಸ್‌ಎಕ್ಸ್ ಕಂಪನಿಯ ಫಾಲ್ಕನ್ ೯ ರಾಕೆಟ್ ಮೂಲಕ ಹೊಸ ಡ್ರ್ಯಾಗನ್ ಬಾಹ್ಯಾಕಾಶ ನೌಕೆ ಗಗನಯಾತ್ರಿಗಳ ತಂಡವನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕೊಂಡೊಯ್ಯುತ್ತಿದೆ. ಈ ಮಿಷನ್‌ಗೆ ಅಮೆರಿಕದ ಅನುಭವಿ ಗಗನಯಾತ್ರಿ ಪೆಗಿ ವಿಟ್ಸನ್ ನಾಯಕತ್ವ ವಹಿಸಿದ್ದು, ಶುಭಾಂಶು ಶುಕ್ಲಾ ಪೈಲಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಉಳಿದ ಇಬ್ಬರು ಸದಸ್ಯರಾದ ಹಂಗೇರಿಯ ತಿಬೋರ್ ಕಪು ಮತ್ತು ಪೋಲಂಡ್‌ನ ಸ್ಲಾವೊಸ್ ಉಜ್ನಾನ್ಸ್ಕಿ-ವಿಸ್ನೀವ್ಸ್ಕಿ, ಯೋಜನೆಯ ತಜ್ಞರಾಗಿರಲಿದ್ದಾರೆ. ಬಾಹ್ಯಾಕಾಶಕ್ಕೆ ತೆರಳುವ ವೇಳೆ ಶುಭಾಂಶು ಶುಕ್ಲಾ ಮಾತನಾಡಿ, ಇದು ತಮ್ಮ ವೈಯಕ್ತಿಕ ಪ್ರಯಾಣವಲ್ಲ. ಭಾರತದ ಮಾನವ ಬಾಹ್ಯಾಕಾಶ ಪ್ರಯಾಣವಾಗಿದೆ. ತಮ್ಮೊಂದಿಗೆ ಭಾರತದ ಧ್ವಜವನ್ನು ಕೊಂಡೊಯ್ಯುತ್ತಿದ್ದೇನೆ ಎಂದು ಅವರು ತಿಳಿಸಿದ್ದಾರೆ.  ರಾಕೇಶ್ ಶರ್ಮಾ ನಂತರ ನಾಲ್ಕು ದಶಕಗಳ ಬಳಿಕ ಬಾಹ್ಯಾಕಾಶಕ್ಕೆ ಯಾತ್ರೆ ಮಾಡುತ್ತಿರುವ ಮೊದಲ ಭಾರತೀಯ ಇವರಾಗಿದ್ದಾರೆ. ಈ ಮಿಷನ್ ಅನ್ನು ಅಮೆರಿಕದ

ಫ್ಲೋರಿಡಾದಲ್ಲಿರುವ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಭಾರತೀಯ ಸಮಯ ಇಂದು ಮಧ್ಯಾಹ್ನ ೧೨ ಗಂಟೆ ೧ ನಿಮಿಷಕ್ಕೆ ಉಡಾವಣೆ ಮಾಡಲಾಯಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಮಾಹಿತಿಯಂತೆ, ಅಕ್ಸಿಯಂ-೪ ಮಿಷನ್ ನಾಳೆ ಭಾರತೀಯ ಕಾಲಮಾನ ಸಂಜೆ ೪:೩೦ಕ್ಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಲಿದೆ. ಈ ವೇಳೆ ಗಗನಯಾತ್ರಿಗಳ ತಂಡ ಅಲ್ಲಿನ ವಾತಾವರಣದಲ್ಲಿ ಸುಮಾರು ಎರಡು ವಾರಗಳ ಕಾಲ ಸೂಕ್ಷ್ಮ ಗುರುತ್ವಾಕರ್ಷಣೆಯಲ್ಲಿ ಸಂಶೋಧನೆ, ತಂತ್ರಜ್ಞಾನ ಪ್ರಾತ್ಯಕ್ಷಿಕೆ ನಡೆಸಲಿದೆ. ಈ ಮಿಷನ್‌ನಡಿ ೩೧ ರಾಷ್ಟ್ರಗಳ ೬೦ಕ್ಕೂ ಹೆಚ್ಚು ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಾಗುತ್ತಿದ್ದು, ಇದರಲ್ಲಿ ಹಲವಾರು ನೂತನ ಸಂಶೋಧನಾ ಕಾರ್ಯಗಳ ಮುಂದಾಳತ್ವವನ್ನು ಇಸ್ರೋ ವಹಿಸಿದೆ. ಅಕ್ಸಿಯಮ್-೪ ಮಿಷನ್ ಆರಂಭದಲ್ಲಿ ಅನೇಕ ವಿಳಂಬಗಳನ್ನು ಅನುಭವಿಸಿತು. ಆರಂಭದಲ್ಲಿ ಅನಾನುಕೂಲ ಹವಾಮಾನ, ಬಳಿಕ ಫಾಲ್ಕನ್ ೯ ರಾಕೆಟ್‌ನಲ್ಲಿ ತಾಂತ್ರಿಕ ದೋಷಗಳು, ನಂತರ ವಿಸ್ತೃತ ಪರಿಶೀಲನೆ ಮತ್ತು ಸಮಸ್ಯೆಗಳ ಪರಿಹಾರವಾದ ನಂತರ ಇಂದು ಯಶಸ್ವಿ ಉಡಾವಣೆ ಕಂಡಿದೆ.

<><><><>

ಇರಾನ್ ಸಂಸತ್ತು ಇಂದು ವಿಶ್ವಸಂಸ್ಥೆಯ ಪರಮಾಣು ಕಾವಲು ಸಂಸ್ಥೆಯಾದ ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ - ಐಎಇಎ ಜೊತೆಗಿನ ಸಹಕಾರವನ್ನು ಸ್ಥಗಿತಗೊಳಿಸುವ ಮಸೂದೆಯನ್ನು ಅಂಗೀಕರಿಸಿತು. ಎಸ್ಫಹಾನ್, ಫೋರ್ಡೋ ಮತ್ತು ನಟಾಂಜ್‌ನಲ್ಲಿರುವ ಮೂರು ಇರಾನಿನ ಪರಮಾಣು ತಾಣಗಳ ಮೇಲೆ ಇತ್ತೀಚೆಗೆ ಅಮೆರಿಕ ನಡೆಸಿದ ದಾಳಿಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಇರಾನ್ ಮಾಧ್ಯಮ ವರದಿ ಮಾಡಿದೆ. ಸಂಸತ್ತಿನ ಮುಕ್ತ ಅಧಿವೇಶನದಲ್ಲಿ, ಶಾಸಕರು ಐಎಇಎ ಜೊತೆಗಿನ ಸಹಕಾರವನ್ನು ಸ್ಥಗಿತಗೊಳಿಸಲು ಕರೆ ನೀಡುವ ಯೋಜನೆಯ ಸಾಮಾನ್ಯ ರೂಪರೇಷೆಯನ್ನು ಒಪ್ಪಿಕೊಂಡರು. ಈ ಅಧಿವೇಶನದಲ್ಲಿ ಹಾಜರಿದ್ದ ೨೨೩ ಪ್ರತಿನಿಧಿಗಳಲ್ಲಿ, ೨೨೧ ಜನರು ಪರವಾಗಿ ಮತ ಚಲಾಯಿಸಿದರು. ಒಬ್ಬರು ವಿರುದ್ಧವಾಗಿ ಮತ ಚಲಾಯಿಸಿದರು ಮತ್ತು ಒಬ್ಬರು ಗೈರುಹಾಜರಾದರು. ಇರಾನ್ ತನ್ನ ಸಾರ್ವಭೌಮತ್ವ, ಹಿತಾಸಕ್ತಿಗಳು ಮತ್ತು ಜನರನ್ನು ರಕ್ಷಿಸುವ ಎಲ್ಲ ಹಕ್ಕನ್ನು ಹೊಂದಿದೆ ಎಂದು ಹೇಳಿದೆ.

<><><><>

ಇಂದು ಸಂವಿಧಾನ ಹತ್ಯೆ ದಿವಸ್ ಆಚರಿಸಲಾಗುತ್ತಿದೆ. ಜೂನ್ ೨೫, ೧೯೭೫ ರಂದು ಭಾರತದ ಸಂವಿಧಾನದ ಆಶಯಗಳನ್ನು ಕಡೆಗಣಿಸಿದಾಗ ಏನಾಯಿತು ಎಂಬುದರ ನೆನಪಿಗಾಗಿ ಈ ದಿನವನ್ನು

ಆಚರಿಸಲಾಗುತ್ತಿದೆ. ತುರ್ತು ಪರಿಸ್ಥಿತಿಯ ಮಿತಿಮೀರಿದ ಪರಿಣಾಮದಿಂದ ಬಳಲಿದ ಪ್ರತಿಯೊಬ್ಬ ವ್ಯಕ್ತಿಗೂ ಗೌರವ ಸಲ್ಲಿಸುವ ದಿನವೂ ಇದಾಗಿದೆ.

ಇಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ತುರ್ತು ಪರಿಸ್ಥಿತಿಯ ಕರಾಳ ದಿನದ ಕುರಿತು ನಿರ್ಣಯ ಅಂಗೀಕರಿಸಲಾಗಿದೆ. ಇದೇ ವೇಳೆ ಸಂಪುಟ ಸಭೆಯಲ್ಲಿ ೨ ನಿಮಿಷಗಳ ಮೌನ ಆಚರಿಸಲಾಯಿತು.

**ಈ ಕುರಿತು ಒಂದು ವರದಿ..... (ಅಭಯ್ ೧ ನಿಮಿಷ ೪೯ ಸೆಕೆಂಡ್‌ಗಳು)**

ಜಯಪ್ರಕಾಶ್ ನಾರಾಯಣ್, ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ ಮತ್ತು ಇತರರು ಸೇರಿದಂತೆ ವಿರೋಧ ಪಕ್ಷದ ನಾಯಕರು ತುರ್ತು ಪರಿಸ್ಥಿತಿಯ ಸಮಯದಲ್ಲಿ ಆಂತರಿಕ ಭದ್ರತಾ ನಿರ್ವಹಣೆ ಕಾಯ್ದೆ-ಮಿಸಾ ಅಡಿಯಲ್ಲಿ ಬಂಧಿಸಲ್ಪಟ್ಟರು. ಷಾ ಆಯೋಗದ ವರದಿಯ ಪ್ರಕಾರ, ಈ ಕಾಯ್ದೆಯನ್ನು ವ್ಯಾಪಕವಾಗಿ ಬಳಸಲಾಯಿತು ಮತ್ತು ಸುಮಾರು ೩೫ ಸಾವಿರ ಜನರನ್ನು ವಿಚಾರಣೆಯಿಲ್ಲದೆ ಅಕ್ರಮ ಬಂಧನದಲ್ಲಿ ಇಡಲಾಯಿತು. ಭಾರತದ ಒಂದು ಲಕ್ಷ ೮೩ ಸಾವಿರ ಸಾಮರ್ಥ್ಯದ ಜೈಲುಗಳಲ್ಲಿ ಎರಡು ಲಕ್ಷ ೨೦ ಸಾವಿರಕ್ಕೂ ಹೆಚ್ಚು ಕೈದಿಗಳಿದ್ದರು. ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ತಮ್ಮ ಆಲೋಚನೆಗಳನ್ನು ಹಂಚಿಕೊಂಡ ಪ್ರಧಾನಿ ನರೇಂದ್ರ ಮೋದಿ, ತುರ್ತು ಪರಿಸ್ಥಿತಿಯ ಸಮಯದಲ್ಲಿ ದೌರ್ಜನ್ಯಗಳನ್ನು ಎದುರಿಸುತ್ತಿದ್ದರೂ ಪ್ರಜಾಪ್ರಭುತ್ವದ ಮೇಲಿನ ಜನರ ನಂಬಿಕೆ ಹಾಗೆಯೇ ಉಳಿದಿದೆ ಎಂದು ಹೇಳಿದ್ದರು.

**ಧ್ವನಿ : ನರೇಂದ್ರ ಮೋದಿ**

ತುರ್ತು ಪರಿಸ್ಥಿತಿಯ ಸಮಯದಲ್ಲಿ ಜೈಲು ಶಿಕ್ಷೆ ಅನುಭವಿಸಿದ ಖ್ಯಾತ ಪತ್ರಕರ್ತ ರಾಮ್ ಬಹದ್ದೂರ್ ರೈ ಅವರು ಆಕಾಶವಾಣಿಯೊಂದಿಗೆ ಮಾತನಾಡಿ ಆ ಅವಧಿಯಲ್ಲಿ ನಡೆದ ದೌರ್ಜನ್ಯಗಳ ಬಗ್ಗೆ ಹಂಚಿಕೊಂಡರು.

**ಧ್ವನಿ : ರಾಮ್ ಬಹದ್ದೂರ್ ರೈ**

ಸುಮಾರು ೨೧ ತಿಂಗಳುಗಳ ಕಾಲ ನಡೆದ ತುರ್ತು ಪರಿಸ್ಥಿತಿಯ ಸಮಯದಲ್ಲಿ, ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಲಾಗಿತ್ತು.

<><><><>

ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ ಕ್ಕೆ ಹೊಂದಿಕೆಯಾಗುವ ಒಂದು ಮಹತ್ವದ ನಿರ್ಧಾರದಲ್ಲಿ, ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ - ಸಿಬಿಎಸ್‌ಇ ೨೦೨೬ ರ ಶೈಕ್ಷಣಿಕ ವರ್ಷದಿಂದ ೧೦ನೇ

ತರಗತಿಗೆ 'ಎರಡು ಮಂಡಳಿ ಪರೀಕ್ಷಾ ವ್ಯವಸ್ಥೆ'ಯನ್ನು ಜಾರಿಗೆ ತರುವುದಾಗಿ ಘೋಷಿಸಿದೆ, ಇದು ವಿದ್ಯಾರ್ಥಿಗಳು ಬಯಸಿದರೆ ಮೂರು ವಿಷಯಗಳಲ್ಲಿ ತಮ್ಮ ಅಂಕಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶ ನೀಡುತ್ತದೆ. ಸಿಬಿಎಸ್ಇ ಪರೀಕ್ಷಾ ನಿಯಂತ್ರಕ ಡಾ. ಸನ್ಯಾಮ್ ಭಾರದ್ವಾಜ್ ಹೊರಡಿಸಿದ ಅಧಿಕೃತ ಸುತ್ತೋಲೆಯ ಪ್ರಕಾರ, ಎಲ್ಲಾ ವಿದ್ಯಾರ್ಥಿಗಳು ಫೆಬ್ರವರಿ ಮಧ್ಯದಿಂದ ನಿಗದಿಯಾಗಿರುವ ಮೊದಲ ಮಂಡಳಿ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಮೂರು ವಿಷಯಗಳಲ್ಲಿ ತಮ್ಮ ಅಂಕಗಳನ್ನು ಹೆಚ್ಚಿಸಿಕೊಳ್ಳಲು ಬಯಸುವವರು ಮೇ ತಿಂಗಳಲ್ಲಿ ನಡೆಯಲಿರುವ ಎರಡನೇ ಮಂಡಳಿ ಪರೀಕ್ಷೆಗೆ ಹಾಜರಾಗಬಹುದು. ಎರಡು ಪರೀಕ್ಷೆಗಳ ಫಲಿತಾಂಶಗಳನ್ನು ಕ್ರಮವಾಗಿ ಏಪ್ರಿಲ್ ಮತ್ತು ಜೂನ್‌ನಲ್ಲಿ ಪ್ರಕಟಿಸಲಾಗುತ್ತದೆ.

<><><><>

ಒಡಿಶಾದಲ್ಲಿ, ಪವಿತ್ರ ನಗರವಾದ ಪುರಿಯಲ್ಲಿ ಇದೇ ೨೭ರಿಂದ ಪ್ರಾರಂಭವಾಗಲಿರುವ ವಿಶ್ವಪ್ರಸಿದ್ಧ ಭಗವಾನ್ ಜಗನ್ನಾಥ ರಥಯಾತ್ರೆಗೆ ಎಲ್ಲಾ ಭದ್ರತಾ ವ್ಯವಸ್ಥೆಗಳನ್ನು ಅಂತಿಮಗೊಳಿಸಲಾಗಿದೆ. ಸಂಚಾರ ನಿರ್ವಹಣೆ, ಜಗನ್ನಾಥ ದೇವಾಲಯದ ಒಳಗೆ ಮತ್ತು ಹೊರಗೆ ಭದ್ರತೆ ಮತ್ತು ರಥಗಳ ಸುತ್ತ ಮುತ್ತಲ ಜನಸಂದಣಿ ನಿಯಂತ್ರಣ ಮತ್ತು ಕರಾವಳಿ ಪ್ರದೇಶಗಳಲ್ಲಿ ಭದ್ರತೆಗಾಗಿ ಒಡಿಶಾ ಪೊಲೀಸರು ವಿಶೇಷ ವ್ಯವಸ್ಥೆಗಳನ್ನು ಮಾಡಿದ್ದಾರೆ. ಮೊದಲ ಬಾರಿಗೆ, ಪುರಿ ಮತ್ತು ಸುತ್ತಮುತ್ತ ಸಮಗ್ರ ಕಮಾಂಡ್-ಅಂಡ್-ಕಂಟ್ರೋಲ್ ವ್ಯವಸ್ಥೆ ಸ್ಥಾಪಿಸಲಾಗಿದ್ದು, ಇದರಲ್ಲಿ ಸುಮಾರು ೨೭೫ ಕೃತಕಬುದ್ದಿಮತ್ತೆ ಸಕ್ರಿಯಗೊಳಿಸಿದ ಸಿಸಿಟಿವಿಗಳಿಂದ ಕಣ್ಗಾವಲು ಇರಿಸಲಾಗಿದೆ. ರಥಯಾತ್ರೆಗಾಗಿ ಪವಿತ್ರ ಕರಾವಳಿ ನಗರದಾದ್ಯಂತ ೨೦೦ ಪೊಲೀಸ್ ಪಡೆ, ಬಿಎಸ್ಎಫ್ ಮತ್ತು ಸಿಆರ್‌ಪಿಎಫ್‌ನ ಎಂಟು ಕಂಪನಿಗಳನ್ನು ನಿಯೋಜಿಸಲಾಗಿದೆ. ರಥಯಾತ್ರೆಯ ಸಮಯದಲ್ಲಿ ಕೋಸ್ಟ್ ಗಾರ್ಡ್ ಏರ್ ಎನ್‌ಕ್ಲೇವ್ ಸಮುದ್ರದಲ್ಲಿ ವೈಮಾನಿಕ ಕಣ್ಗಾವಲು ನಡೆಸುತ್ತದೆ. ಈ ವರ್ಷದ ರಥಯಾತ್ರೆ ಉತ್ಸವಕ್ಕಾಗಿ ಒಡಿಶಾ ಪೊಲೀಸರು ಶ್ವಾನ ದಳ ನಿಯೋಜಿಸಿದ್ದು, ಸಾಕಷ್ಟು ಸಂಖ್ಯೆಯ ಡ್ರೋನ್ ವಿರೋಧಿ, ವಿಧ್ವಂಸಕ ವಿರೋಧಿ ವ್ಯವಸ್ಥೆ ಅಳವಡಿಸಿದ್ದಾರೆ.

<><><><>

ಪುಣೆ ಮೆಟ್ರೋ ರೈಲು ಯೋಜನೆಯ ಎರಡನೇ ಹಂತದ ವಿಸ್ತರಣೆಗೆ ಸರ್ಕಾರ ನಿರ್ಧಾರ ತೆಗೆದುಕೊಂಡಿದ್ದು, ಇದಕ್ಕೆ ೩ ಸಾವಿರದ ೬೨೬ ಕೋಟಿ ರೂಪಾಯಿ ವೆಚ್ಚವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ತೆಗೆದುಕೊಂಡ ನಿರ್ಧಾರಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಈ ಮಾಹಿತಿ ನೀಡಿದ್ದಾರೆ.

ಬಳಿಕ ಅವರು, ೧೩ ನಿಲ್ದಾಣಗಳೊಂದಿಗೆ ಹೊಸ ಮೆಟ್ರೋ ಮಾರ್ಗವಾಗಿ ೧೨.೭೫ ಕಿಲೋಮೀಟರ್ ಹೆಚ್ಚುವರಿ ಉದ್ದವನ್ನು ಸೇರಿಸಲಾಗುವುದು ಎಂದು ಹೇಳಿದರು.

<><><><>

ಪುರುಷರ ಹಾಕಿ ಇಂಡಿಯಾ ಮಾಸ್ಟರ್ಸ್ ಕಪ್‌ನ ಇಂದು ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ತಮಿಳುನಾಡು ತಂಡವು ಚಂಡೀಗಢವನ್ನು ೩ ಗೋಲುಗಳಿಂದ ಸೋಲಿಸಿತು. ಎರಡನೇ ಸೆಮಿಫೈನಲ್ ಒಡಿಶಾ ಮತ್ತು ಮಹಾರಾಷ್ಟ್ರ ನಡುವೆ ನಡೆಯಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>